# ಶರಣು ನಿನಗೆ ಶರಣೆಂಬೆನು ವಿಠಲ

(Version – 1)

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** Singer has followed these lyrics fully.
3. **Note:** There are other versions taken from the standard reference books. There are many wordings which are similar but majority of them are different. Hence, they are listed under "Version 2 – sharaNu sharaNu ninagembeno viTTala". Both these songs are listed separately in the website.

ರಾಗ: ಮಧ್ಯಮಾವತಿ ತಾಳ: ಆದಿ

ಶರಣು ನಿನಗೆ ಶರಣೆಂಬೆನು ವಿಠಲ
ಕರುಣವಾರಿಧಿ ಎನ್ನ ಕಾಯೋ ವಿಠಲ ॥ ಪ ॥

ದಶರಥ ರಾಯನ ಉದರದಿ ವಿಠಲ
ಶಿಶುವಾಗಿ ಉದಿಸಿದ್ಯೋ ಶ್ರೀ ರಾಮ ವಿಠಲ
ಶಶಿಮುಖಿ ಗೋಪಿಯ ಕಂದನೆ ವಿಠಲ
ಅಸುರೆ ಪೂತನಿಯ ಕೊಂದ್ಯೋ ಕೃಷ್ಣ ವಿಠಲ ॥ 1 ॥

ಅರಸಿ ರುಕ್ಮಿಣಿಗೆ ಅರಸನಾದ್ಯೋ ವಿಠಲ
ಪಿರಿದಾಗಿ ಶಂಖವ ಪಿಡಿದ್ಯೋ ನೀ ವಿಠಲ
ಸರಸಿಜ ಸಂಭವ ಸನ್ನುತ ವಿಠಲ
ನಿರತ ಇಟ್ಟಿಗೆ ಮೇಲೆ ನಿಂತ್ಯೋ ನೀ ವಿಠಲ ॥ 2 ॥

ಕಂಡೆ ನಾ ನಿನ್ನ ವೆಂಕಟನೆಂಬ ವಿಠಲ
ಕುಂಡ ಗೋಳಕರಿಗೊಲಿದು ಬಂದ ವಿಠಲ
ಪಾಂಡುರಂಗ ಕ್ಷೇತ್ರ ಪಾಲನೆ ವಿಠಲ
ಪುಂಡರೀಕಾಕ್ಷ ಶ್ರೀ ಪುರಂದರ ವಿಠಲ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದದಲ್ಲಿ ತಿರುಮಲೆಯ ವೆಂಕಟೇಶ್ವರನನ್ನೂ ಪಂಢರಪುರದ ಪಾಂಡುರಂಗ ವಿಟ್ಠಲನನ್ನೂ ಒಂದೇ ದೈವವೆಂದು ಬಗೆದು ಸ್ತುತಿಸಿದೆ.

**ಇಟ್ಟಿಗೆ ಮೇಲೆ ನಿಂತ್ಯೋ** – ಭಕ್ತನಾದ ಪುಂಡಲೀಕನು ತಾಯಿ ತಂದೆಯರ ಸೇವೆಯಲ್ಲಿದ್ದಾಗ ಪಾಂಡುರಂಗನು ಬರಲು ಅವನಿಗಾಗಿ ಹತ್ತಿರವಿದ್ದ ಒಂದು ಇಟ್ಟಿಗೆಯನ್ನೇ ಅವನೆಡೆ ಸರಿಸಿದನೆಂದೂ, ಪಾಂಡುರಂಗನು ಆ ಇಟ್ಟಿಗೆಯ ಮೇಲೆ ನಿಂತನೆಂದೂ ಸ್ಥಳ ಪುರಾಣ; ಈಗಲೂ ವಿಟ್ಠಲನು ಇಟ್ಟಿಗೆಯ ಮೇಲೆ ನಿಂತಿರುವಂತೆಯೇ ಮೂರ್ತಿಲಕ್ಷಣ.

**Classification:** Keerthane
**Ankita:** sri purandara vittala
**Location:** tirupati
**Category:** Srinivasa Stuti,
**Sub-Category:** srinivasa, Tirupati, Sharana, karuna, Samudra, Dasharatha, udara, rama, gopi, koosu, asura, putani, Krishna, Rukmini, shankha, panduranga, ittige,
**Pravachana:** NA
**Explanation:** NA